ಶ್ರೀ ಜಿ. ಮಾದೇಗೌಡ.—ಎಲ್ಲ ಕಡೆ ಮಾಡಿದ್ದೇವೆ. ಪಾಯಿಂಟ್ ಬೇಕೆಂದು ದುಡ್ಡು ಕಟ್ಟಿದರೆ ತೋರಿಸಿಕೊಡುತ್ತೇವೆ. ದುಡ್ಡು ಕಟ್ಟದೆ ಇರುವುದರಿಂದ ಪಾಯಿಂಟ್ ತೋರಿಸ ವುದಕ್ಕಾಗಿಲ್ಲ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗ್ಗಡೆ.—ಪಾಯಿಂಟ್ ತೋರಿಸಿದ್ದು ಫೆಯಿಲ್ ಆಯಿತು. ಎರಡೆರಡು ಸಾರಿ ತೋಡಿಸಿಯೂ ಫೆಯಿಲ್ ಆಗಿದೆ. ಆದರೆ ಸರ್ವೆ ಆಗಿದೆ ಎಂದು ಹೇಳುತ್ತಾರೆ.

ಅಧ್ಯಕ್ಷರು.—ಶಿವಮೊಗ್ಗ ಜಿಲ್ಲೆಯಲ್ಲಿ ಮಾಡಿಲ್ಲವೆ ?

ಶ್ರೀ ಜಿ. ಮಾದೇಗೌಡ.—ಎಲ್ಲ ಜಿಲ್ಲೆಗಳಲ್ಲಿ ಎಷ್ಟೆಷ್ಟು ಬಾವಿಗಳನ್ನು ತೋಡುವುದಕ್ಕೆ ಸಾಧ್ಯ ಎಂದು ಸರ್ವೆ ಮಾಡಿದ್ದೇವೆ. ಯಾರಾದರೂ ಪಾಯಿಂಟ್ ತೋರಿಸಿ ಎಂದರೆ ತೋರಿಸುತ್ತೇವೆ. ನಮ್ಮ ಇಲಾಖೆಯ ವತಿಯಿಂದ ಪಾಯಿಂಟ್ ತೋರಿಸಿದ್ದರಲ್ಲಿ ೫ ಪರ್ಸೆಂಟ್ ಬಾವಿಗಳು ಫೆಯಿಲ್ ಆಗಿರ ಬಹುದು, ಅದಕ್ಕಿಂತ ಜಾಸ್ತಿ ಆಗಿಲ್ಲ. ಅದಕ್ಕೆ ನಾನಾ ಕಾರಣಗಳಿವೆ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗ್ಗಡೆ —೫-೬ ಮಾತ್ರವಲ್ಲ. ಬಹಳ ಸಂಖ್ಯೆಯಲ್ಲಿ ಫೆಯಿಲ್ ಆಗಿವೆ. ಸರ್ವೆ ಆಗಿದ್ದರೂ ಇಷ್ಟು ಸಂಖ್ಯೆಯಲ್ಲಿ ಫೆಯಿಲ್ ಆಗುವುದಕ್ಕೆ ಕಾರಣವೇನು ? ಭೂಗರ್ಭ ಸರ್ವೆ ಆಗಿರಬಹುದು, ಗಣಿ ಸರ್ವೆ ಆಗಿರಬಹುದು. ಅದೇ ರೀತಿ, ನೆಲದೊಳಗಿನ ನೀರನ್ನು ಉಪಯೋಗಿಸಿ ಸಾಮಾನ್ಯ ಬರಗಾಲವನ್ನು ತಪ್ಪಿಸಲಿಕ್ಕೆ ಪ್ರತ್ಯೇಕ ಸರ್ವೆ ಮಾಡಿಸಿ ಇಂಥಿಂಥ ಕಡೆ ಇಷ್ಟೆಷ್ಟು ಆಡಿಯಲ್ಲಿ ನೀರು ಸಿಗುತ್ತದೆಂದು ಹೇಳುವ ವಿಶೇಷ ರೀತಿಯ ಸರ್ವೆಯನ್ನು ಮಲೆನಾಡು ಭಾಗದಲ್ಲಿ ಮಾಡಿಸಬೇಕು.

ಶ್ರೀ ಜಿ. ಮಾದೇಗೌಡ.—ಪ್ರತಿಯೊಂದು ಜಿಲ್ಲೆಯಲ್ಲಿ ಎಷ್ಟು ಬಾವಿಗಳನ್ನು ತೋಡುವುದಕ್ಕೆ ಸಾಧ್ಯ ಮತ್ತು ಎಷ್ಟು ಪ್ರಮಾಣದಲ್ಲಿ ನೀರು ಸಿಗುತ್ತದೆಂಬುದನ್ನು ಒಟ್ಟಾರೆ ಸರ್ವೆ ಮಾಡಿದ್ದೇವೆಂದು ಆಗಲೇ ಹೇಳಿದ್ದೇನೆ. ಯಾವ ಪಾಯಿಂಟ್‌ನಲ್ಲಿ ನೀರು ಬರುತ್ತದೆಂಬುದನ್ನು ಸರ್ವೆ ಮಾಡಬೇಕಾಗುತ್ತದೆ. ಅದಕ್ಕೆ ಯಾರಾದರೂ ಪ್ರತ್ಯೇಕವಾಗಿ ದುಡ್ಡು ಕಟ್ಟಿ ಕೇಳಿದರೆ ಇಂಥ ಕಡೆ ನೀರು ಬರುತ್ತದೆಂಬುದನ್ನು ಹೇಳುತ್ತೇವೆ.

Control of Heavy Traffic between Mysore–Bangalore

814. SRI M.S. ATMANANDA (Mandya).—Will the Minister for Transport and Minor Irrigation be pleased to state.—

(a) whether it has come to the notice of the Government that the Vehicles Plying in Mysore–Bangalore Highway has to pass through densely populated areas of the towns;

(b) the measures proposed to be under–taken by the Government to solve the hardship caused to the heavy vehicular traffic and pedestrians?

SRI M. M. J. SADYOJATHA (Minister for Transport and Minor Irrigation).—

(a) Yes.

(b) (1) Instructions have been issued that the Pedestrians have to walk on the side of the road.

(2) Suitable action has been taken that the vehicles should reduce the speed limit while passing through the middle of the town;

(3) Police Officers are controlling the Vehicular Traffic daily.

ಶ್ರೀ ಎಂ. ಎಸ್. ಆತ್ಮಾನಂದ --ನನ್ನ (ಆ) ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರವನ್ನು ಓದಿದೆ; ಆದರಲ್ಲಿ ಕ್ರಮ ಕೈಗೊಂಡಿರುವುದಾಗಿ ತಿಳಿಸಿದ್ದೀರಿ. ಹಾಗಾದರೆ ಏನು ಕ್ರಮ ಕೈಗೊಂಡಿದ್ದೀರಿ ?

ಅಧ್ಯಕ್ಷರು.—ಅಲ್ಲಿ ಕೊಟ್ಟಿರುವಷ್ಟೆಲ್ಲ ಕ್ರಮಗಳು.

ಶ್ರೀ ಎಂ. ಎಸ್. ಆತ್ಮಾನಂದ.--ಬೆಂಗಳೂರು ಮೈಸೂರು ನಡುವಿನ ಹೆದ್ದಾರಿ ಚನ್ನಪಟ್ಟಣ ಮತ್ತು ಮಂಡ್ಯದ ಮಧ್ಯೆ ಹಾದು ಹೋಗುತ್ತದೆ. ಅಲ್ಲಿ ಜನ ಸಂಚಾರ ಬಹಳ ಕಿಷ್ಕಿಂದವಾಗಿರುತ್ತದೆ. ಸಾರಿಗೆ ಸಂಸ್ಥೆಯ ಬಸ್ಸುಗಳು ಬಹಳ ವೇಗವಾಗಿ ಹಾದು ಹೋಗುತ್ತವೆ. ಮಂಡ್ಯ ನಗರದ ಶಾಲಾ-ಕಾಲೇಜುಗಳು ಆ ಹೆದ್ದಾರಿಯ ಪಕ್ಕದಲ್ಲಿವೆ. ಆದ್ದರಿಂದ, ಅಲ್ಲಿ ಸಂಚಾರ ನಿಯಂತ್ರಿಸಲು ಏನು ಕ್ರಮ ಕೈಗೊಳ್ಳುತ್ತೀರಿ ?

ಶ್ರೀ ಕಾಗೋಡು ತಿಮ್ಮಪ್ಪ (ಸಾರಿಗೆ ಮಂತ್ರಿಗಳ ಪರವಾಗಿ).—ಉತ್ತರದಲ್ಲಿ ಕೊಟ್ಟಿರುವ ಈ ಕ್ರಮಗಳ ಜೊತೆಗೆ ಮೈಸೂರಿನಲ್ಲಿ ನಡೆದ ಮಂತ್ರಿಮಂಡಲದ ಸಭೆಯಲ್ಲಿ ಮಂಡ್ಯ ನಗರದ ಒಳಗಡೆ ಹಾದು ಹೋಗುವ ರಸ್ತೆ ಏನಿದೆ ಅದನ್ನು ಆಗಲೇ ಮಾಡಬೇಕೆಂಬ ಒಂದು ತೀರ್ಮಾನ ಮಾಡಿದ್ದೇವೆ. ಆ ಬಗ್ಗೆ ಅಂದಾಜುಗಳನ್ನು ತಯಾರಿಸುತ್ತಿದ್ದೇವೆ. ಜೊತೆಗೆ ಟೌನ್ ಪ್ಲಾನಿಂಗ್ ಅಥಾರಿಟಿಯವರು ರಿಬ್ಬನ್ ರೋಡ್ ಮಾಡಬೇಕೆಂದು ಕೂಡ ಆಲೋಚಿಸುತ್ತಿದ್ದಾರೆ. ಅದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎಂ.ಎಸ್. ಆತ್ಮಾನಂದ.—ಆ ಒಂದು ಕೆಲಸದ ಅಂದಾಜು ಬೆಚ್ಚ ೧೫ ಲಕ್ಷ ರೂಪಾಯಿಗಳು ಎಂದು ತಿಳಿದು ಬಂದಿದೆ. ಮಂಡ್ಯ ನಗರದ ಮಧ್ಯದಲ್ಲಿ ಹಾದು ಹೋಗುವ ಹೆದ್ದಾರಿಯನ್ನು ೧೯೮೧-೮೨ನೇ ಸಾಲಿನಲ್ಲಿ ವಿಸ್ತರಿಸುತ್ತೇವೆಂದು ಹೇಳಿದ್ದರು. ಆ ಕಾರ್ಯ ಮಂದಗತಿಯಲ್ಲಿ ಸಾಗುತ್ತಿದೆ. ದಿನೇದಿನೇ ಅಲ್ಲಿ ಅಪಘಾತಗಳು ಹೆಚ್ಚಾಗುತ್ತಿವೆ. ಆದ್ದರಿಂದ, ಯಾವಾಗ ಆ ಕೆಲಸವನ್ನು ಮುಗಿಸುತ್ತೀರಿ ?

ಶ್ರೀ ಕಾಗೋಡು ತಿಮ್ಮಪ್ಪ.—ಆ ವಿಚಾರವನ್ನು ಮಂತ್ರಿಮಂಡಲದ ಸಭೆಯಲ್ಲಿ ತೀರ್ಮಾನ ಮಾಡಿದ್ದೆವು ಈ ಸಾರಿಯ ಆಯವ್ಯಯದಲ್ಲಿ ಅದನ್ನು ಸೇರಿಸಿಲ್ಲ. ತೀರ್ಮಾನದ ಪ್ರಕಾರ ಅಂದಾಜನ್ನು ತಯಾರಿಸುತ್ತಿದ್ದೇವೆ. ಹಣಕಾಸಿನ ಪರಿಸ್ಥಿತಿಯನ್ನು ನೋಡಿ ಈ ವರ್ಷಕ್ಕೆ ಎಷ್ಟು ಪ್ರಮಾಣದಲ್ಲಿ ಮಾಡಲಿಕ್ಕೆ ಸಾಧ್ಯ ಆ ಪ್ರಕಾರ ಮಾಡುತ್ತೇವೆ.

ಶ್ರೀ ಬಿ ಎ. ಮೊಹಿದ್ದೀನ್.—ಹೆದ್ದಾರಿಗಳು ಹೋಗುವ ಕಡೆ ಬೈಪಾಸ್‌ಗಳನ್ನು ಹಿಂದೆ ವೇಗವಾಗಿ ಮಾಡುತ್ತಿದ್ದರು. ಈಗ ಲೋಕೋಪಯೋಗಿ ಇಲಾಖೆಯವರು ಅದನ್ನು ಮಾಡುತ್ತಿಲ್ಲ. ಮಂಡ್ಯದಲ್ಲಿ ಮಾತ್ರವಲ್ಲ, ಪುತ್ತೂರು ಮುಂತಾದ ಕಡೆಗಳಲ್ಲೆಲ್ಲ ಇಂಥ ಸಮಸ್ಯೆ ಉಂಟಾಗಿದೆ. ಹೆಚ್ಚುತ್ತಿರುವ ಜನಸಂಖ್ಯೆ ಒಂದು ಕಡೆಯಾದರೆ ಈ ಕೆಲಸವನ್ನು ಕೈಬಿಟ್ಟಿರುವುದು ಮತ್ತೊಂದು ಕಡೆ. ಈ ರೀತಿ ಏಕೆ ಮಾಡುತ್ತೀರಿ? ಇನ್ನು ಮುಂದೆ ಆದರೂ ಇದರ ಕಡೆಗೆ ಹೆಚ್ಚು ನಿಗಾ ಕೊಟ್ಟು ಮಾಡಿಸುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೆ, ಬೈ-ಪಾಸ್‌ಗಳನ್ನು ಮಾಡತಕ್ಕದ್ದು ದೊಡ್ಡ ನಗರಗಳಲ್ಲಿ ಮತ್ತು ಜನಸಂದಣಿ ಇರತಕ್ಕ ಪ್ರದೇಶಗಳಲ್ಲಿ. ಇದನ್ನು ಮಾಡುವಾಗ ಅನೇಕ ಕಡೆಗಳಲ್ಲಿ ಜಮೀನಿನ ತೊಂದರೆ ಸಮಸ್ಯೆ ಬರುತ್ತದೆ. ಹೆಚ್ಚಿನ ಖರ್ಚಿಲ್ಲದಂತೆ ಸ್ಥಳೀಯ ಜನರಿಗೆ ಪುಸಲಾಯಿಸಿ ಸದಸ್ಯರು ಪ್ರೇರೇಪಣೆ ಮಾಡಿ ಸರ್ಕಾರಕ್ಕೆ ಜಮೀನನ್ನು ಮುಫತ್ತಾಗಿ ಒದಗಿಸಿಕೊಡುವುದಾದರೆ ಕೆಲಸವನ್ನು ವೇಗವಾಗಿ ಮಾಡಬಹುದು. ಮಾನ್ಯ ಸದಸ್ಯರು ಈ ಬಗ್ಗೆ ಜನರಲ್ಲಿ ಪ್ರೇರೇಪಣೆ ಮಾಡಬೇಕು.

ಶ್ರೀ ಬಿ.ಎ. ಮೊಹಿದ್ದೀನ್.—ನಿಮ್ಮ ಇಲಾಖೆಯವರು ಈ ಕಾರ್ಯಕ್ರಮವನ್ನು ಕೈಬಿಟ್ಟಿದ್ದಾರೆ ಎಂದು ಹೇಳುತ್ತಾರಲ್ಲ ?

ಶ್ರೀ ಎಂ.ಎಸ್. ಆತ್ಮಾನಂದ.--ಮಾನ್ಯ ಅಧ್ಯಕ್ಷರೇ, ಮೈಸೂರಿನಲ್ಲಿ ನಡೆದ ಮಂತ್ರಿಮಂಡಲದ ಸಭೆಯಲ್ಲಿ ಈ ಬಗ್ಗೆ ನಿರ್ಣಯ ಆಗಿತ್ತು. ಆದರೆ ಮಾನ್ಯ ಮಂತ್ರಿಯವರು ಇನ್ನೂ ಇದರ ಬಗ್ಗೆ ಯೋಜನೆ ಮಾಡುವ ಹಂತದಲ್ಲಿದೆ ಎಂದು ಹೇಳುತ್ತಿದ್ದಾರೆ. ಆದ್ದರಿಂದ ಶೀಘ್ರವಾಗಿ ಈ ಕಾರ್ಯವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.— ಮಂಡಲದ ತೀರ್ಮಾನದ ಪ್ರಕಾರ ಖಂಡಿತವಾಗಿ ಕ್ರಮ ತೆಗೆದುಕೊಳ್ಳುತ್ತೇವೆ.